**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಭದ್ರಾವತಿ**

**ಸಿ.ಸಿ. ನಂ. 6402/2021**

| | | |
|---|---|---|
| **ಹಸೆರುಃ** | **ಮಂಜುನಾಥ** | **ದೋ.ಸಾಃ 27** |
| **ತಂದೆಯ ಹೆಸರುಃ** | **ಒಬಾಳಪ್ಪ** | **ಫ್ರಾ.ಸಾಃ 14** |
| **ವಯಸ್ಸುಃ** | **44 ವರ್ಷ** | **ದಿನಾಂಕಃ 29-11-2024** |
| **ಉದ್ಯೋಗಃ** | **ಪಿ.ಐ** | |
| **ವಾಸಸ್ಥಳಃ** | **ಬೇಲಿಕೆರೆ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ್ವತಃ ಸಾಕ್ಷಿಯಿಂದಃ**

ನಾನು 2019 ರಿಂದ 2021ರವರೆಗೆ ನಾನು ಭದ್ರಾವತಿ ಗ್ರಾಮಾಂತರ ವೃತ್ತ ನೀರಿಕ್ಷನಾಗಿ ಕಾರ್ಯ ನಿರ್ವಹಿಸಿದ್ದೆ.

ದಿಃ31.08.2020 ರಂದು ಈ ಪ್ರಕರಣದ ಕಡತವನ್ನು ಚಾಸಾ- 24 ರವರಿಂದ ಪಡೆದುಕೊಂಡು ಅದೇ ದಿನ ಉಜ್ಜಿನಿಪುರದಲ್ಲಿರುವ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಫಿರ್ಯಾದಿ ತೋರಿಸಿದಂತೆ ಚಾಸಾ- 15 ಮತ್ತು 16 ರವರ ಸಮಕ್ಷಮ ಬೆ. 10.30 ರಿಂದ 11.30 ಗಂಟೆಯವರೆಗೆ ಪಂಚನಾಮೆ ಜರುಗಿಸಿ, ಕಚ್ಚಾ ನಕಾಶೆ ಬರೆದು ಫೋಟೋ ಪಡೆದಿರುತ್ತೇನೆ.

ಸದರಿ ಪಂಚನಾಮೆಯ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ನನ್ನ ಸಹಿಯನ್ನು ಈಗ ನಿಪಿ-2(ಡಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಬರೆದ ಕಚ್ಚಾ ನಕಾಶೆ ದಾಖಲೆಯನ್ನು ಈಗ ನಿಪಿ 28 ಎಂದು ಮತ್ತು ನನ್ನ ಸಹಿಯನ್ನು ಈಗ ನಿಪಿ 28(ಎ) ಎಂದು ಗುರುತಿಸಲಾಯಿತು. ಫೋಟೋಗಳನ್ನು ಈಗಾಗಲೇ ನಿಪಿ 3

ಮತ್ತು 4 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ– 2 ರಿಂದ 4 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

ದಿಃ 07.09.2020 ರಂದು ಚಾಸಾ– 24 ರವರಿಗೆ ಈ ಪ್ರಕರಣದ ಕೃತ್ಯ ನಡೆದ ಬೆಂಗಳೂರಿನಲ್ಲಿರುವ ಮನೆಯ ಪಂಚನಾಮೆ ಜರುಗಿಸಿ ವರದಿ ಮಾಡಲು ಮೆಮೊ ಕೊಟ್ಟಿದ್ದು ಅದರಂತೆ ಸದರಿಯವರು ದಿಃ 11.09.2020 ರಂದು ವರದಿಯೊಂದಿಗೆ ಪಂಚನಾಮೆ, ಕಚ್ಚಾ ನಕಾಶೆ ಮತ್ತು ಫೋಟೋಗಳನ್ನು ಹಾಜರುಪಡಿಸಿರುತ್ತಾರೆ.

ಚಾಸಾ– 24 ರವರಿಗೆ ಕೊಟ್ಟಿದ್ದ ಮೆಮೊವನ್ನು ಈಗ ನೋಡುತ್ತಿತ್ತು ಅದನ್ನು ನಿಪಿ 29 ಎಂದು ಮತ್ತು ನನ್ನ ಸಹಿಯನ್ನು ನಿಪಿ 29(ಎ) ಎಂದು ಗುರುತಿಸಲಾಯಿತು.

ಚಾಸಾ– 24 ರವರ ಹಾಜರುಪಡಿಸಿದ ಪಂಚನಾಮೆ ದಾಖಲೆಯನ್ನು ಹಾಗೂ ಫೋಟೋಗಳನ್ನು ಈಗಾಗಲೇ ನಿಪಿ 5 ರಿಂದ 7 ಎಂದು ಗುರುತಿಸಲಾಗಿದೆ.

ದಿಃ 21.09.2020 ರಂದು ಚಾಸಾ– 1 ರವರು ಠಾಣೆಗೆ ಹಾಜರಾಗಿ ತಮ್ಮ ಮದುವೆಗೆ ಸಂಬಂಧಪಟ್ಟ ಆಮಂತ್ರಣ ಪತ್ರಿಕೆ, ಫೋಟೋಗಳು ಮತ್ತು ಒಡವೆ ಖರೀದಿ ರಶೀದಿ ಮತ್ತು ಹಣ ವರ್ಗಾವಣೆ ಸಂಬಂಧ ದಾಖಲೆಗಳನ್ನು ಹಾಜರುಪಡಿಸಿದ ಮೇರೆಗೆ ಅವುಗಳನ್ನು ಚಾಸಾ– 19 ಮತ್ತು 20 ರವರ ಸಮಕ್ಷಮ ಮ.12 ರಿಂದ 01.30 ರವರೆಗೆ ಜಪ್ತು ಮಾಡಿ ಪಂಚನಾಮೆ ಜರುಗಿಸಿ, ಫೋಟೋ ಪಡೆದಿರುತ್ತೇನೆ.

ಪಂಚನಾಮೆಯನ್ನು ಈಗ ನೋಡುತ್ತಿತ್ತು ಅದನ್ನು ಈಗಾಗಲೇ ನಿಪಿ 5 ಎಂದು ನನ್ನ ಸಹಿಯನ್ನು ನಿಪಿ 5(ಸಿ) ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲಕ್ಕೆ ಚಾಸಾ– 1 ರವರು ಹಾಜರುಪಡಿಸಿದ ಆಮಂತ್ರಣ ಪತ್ರಿಕೆ, ಫೋಟೋಗಳು ಮತ್ತು ಒಡವೆ ಖರೀದಿ ರಶೀದಿ ಮತ್ತು ಹಣ ವರ್ಗಾವಣೆ ಸಂಬಂಧ ದಾಖಲೆಗಳನ್ನು ಈಗ ನೋಡುತ್ತಿತ್ತು

ಅವುಗಳನ್ನು ಈಗಾಗಲೇ ನಿಪಿ 9 ರಿಂದ 24 ಎಂದು ಗುರುತಿಸಲಾಗಿದೆ. ಫೋಟೋವನ್ನು ಈಗಾಗಲೇ ನಿಪಿ 27 ಎಂದು ಗುರುತಿಸಲಾಗಿದೆ.

ಅದೇ ಚಾಸಾ- 5 ರಿಂದ 10 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

ದಿಃ 05.10.2020 ರಂದು ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದು ಖುದ್ದಾಗಿ ಠಾಣೆಗೆ ಹಾಜರಾದ ಮೇರೆಗ ಅವರನ್ನು ದಸ್ತಗಿರಿ ಮಾಡಿ ಕ್ರಮ ಅನುಸರಿಸಿ ನಂತರ ಬಿಡುಗಡೆ ಮಾಡಿರುತ್ತೇನೆ.

ದಿಃ 08.10.2020 ರಂದು ಚಾಸಾ- 1 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ- 22 ರವರಿಂದ ಪಡೆದಿರುತ್ತೇನೆ. ಸದರಿ ದಾಖಲೆಯನ್ನು ಈಗ ನೋಡುತ್ತಿದು ಅದನ್ನು ಈಗ ನಿಪಿ-30 ಎಂದು ಮತ್ತು ನನ್ನ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು.

ದಿಃ 27.10.2020 ರಂದು ಚಾಸಾ- 14 ರವರಿಂದ ಪಿರ್ಯಾದಿ ಮತ್ತು 1 ನೇ ಆರೋಪಿಯ ಮದುವೆಗೆ ಸಂಬಂಧಪಟ್ಟ ದಾಖಲೆಯನ್ನು ಪಡೆದಿರುತ್ತೇನೆ. ಸದರಿ ದಾಖಲೆಯನ್ನು ಈಗ ನೋಡುತ್ತಿದು ಅವುಗಳನ್ನು ಈಗ ನಿಪಿ-31 ಮತ್ತು 32 ಎಂದು ಮತ್ತು ನನ್ನ ಸಹಿಯನ್ನು ನಿಪಿ-31(ಎ) ಮತ್ತು 32(ಎ) ಎಂದು ಗುರುತಿಸಲಾಯಿತು.

ದಿಃ25.04.2021 ರಂದು ತನಿಖೆ ಸಂದರ್ಭದಲ್ಲಿ ಪಡೆದ ಫೋಟೋಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ದಾಖಲೆಯನ್ನು ಈಗ ನೋಡುತ್ತಿದು ಅದನ್ನು ಈಗ ನಿಪಿ-33 ಎಂದು ಮತ್ತು ನನ್ನ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು.

ದಿಃ 10.08.2021 ರಂದು ಪಿರ್ಯಾದಿಯ ಮರುಹೇಳಿಕೆ ದಾಖಲಿಸಿಕೊಂಡಿರುತ್ತೇನೆ.

ತನಿಖೆ ಕಾಲಕ್ಕೆ ಚಾಸಾ-1 ರವರ ಪೋಷಕರು ಬೆಂಗಳೂರಿನ ಆಸ್ತಿ ಮಾರಾಟ ಮಾಡಿದ ದಾಖಲೆಯನ್ನು ಪಡೆದಿರುತ್ತೇನೆ. ಸದರಿ ದಾಖಲೆಯನ್ನು ಈಗ ನೋಡುತ್ತಿದು ಅದನ್ನು ಈಗ ನಿಪಿ-34

ಎಂದು ಮತ್ತು ನನ್ನ ಸಹಿಯನ್ನು ನಿಪಿ–34(ಎ) ಎಂದು ಗುರುತಿಸಲಾಯಿತು.

ಅದೇ ರೀತಿ ಪಿರ್ಯಾದಿದಾರರ ಅಜ್ಜಿ ಜಯಲಕ್ಷ್ಮ ರವರ ಮರಣ ಪ್ರಮಾಣ ಪತ್ರವನ್ನು ತನಿಖೆ ಕಾಲಕ್ಕೆ ಪಡೆದಿರುತೇನೆ. ಅದನ್ನು ಈಗ ನಿಪಿ 35 ಎಂದು ಗುರುತಿಸಲಾಯಿತು.

ಅದೇ ದಿನ ಪ್ರಕರಣದ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎ.ಜಿ.ಡಿ ವಕೀಲರಿಂದಃ</u>**

ತನಿಖೆ ಕಾಲಕ್ಕೆ ನಿಪಿ 1 ರ ದೂರನ್ನು ಓದಿದ್ದೇನೆ. ವರೋಪಚಾರ ಮತ್ತು ವರದಕ್ಷಿಣೆಗೆ ವ್ಯತ್ಯಾಸ ಇದೆ. ಬೇಡಿಕೆ ರೂಪದಲ್ಲಿ ಹಣ ಅಥವಾ ಒಡವೆ ಪಡೆದರೆ ವರದಕ್ಷಿಣೆಯಾಗುತ್ತದೆ ಎಂದರೆ ಸರಿ. ಖುದ್ದಾಗಿ ವರನಿಗೆ ಮದುವೆ ಸಂದರ್ಭದಲ್ಲಿ ಕೊಡುವ ಉಡುಗೊರೆ ವರೋಪಚಾರ ಆಗುತ್ತದೆ ಎಂದರೆ ಸರಿ.

ನಿಪಿ 3 ಮತ್ತು 4 ರ ಫೋಟೋಗಳನ್ನು ನಮ್ಮ ಸಿಬ್ಬಂದಿ ಮೂಲಕ ತೆಗೆಸಿರುತ್ತೇನೆ. ಸದರಿ ಫೋಟೋಗಳಲ್ಲಿ ದಿನಾಂಕ ನಮೂದಾಗಿಲ್ಲ ಎಂದರೆ ಸರಿ. ಸದರಿ ಫೋಟೋಗಳನ್ನು ಠಾಣೆಯಲ್ಲೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಫೋಟೋ ದಲ್ಲಿ ಕಾಣುವ ಪಂಚರ ಹೆಸರನ್ನು ಅಂತಿಮ ವರದಿಯಲ್ಲಿ ನಮೂದಿಸಿರುತ್ತೇನೆ. ಸದರಿ ಫೋಟೋದಲ್ಲಿ ಕಾಣುವ ಮನೆ ಪಿರ್ಯಾದಿಗೆ ಸಂಬಂಧಿಸಿದ್ದು ಅದರ ಬಗ್ಗೆ ಪಂಚನಾಮೆಯಲ್ಲಿ ಉಲ್ಲೇಖಿಸಿದ್ದೇನೆ. ಸದರಿ ಮನೆಗೆ ಸಂಬಂಧಪಟ್ಟ ದಾಖಲೆ ಪಡೆದಿಲ್ಲ. ಚಾಸಾ–15 ಮತ್ತು 16 ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ.

ಚಾಸಾ– 2 ರಿಂದ 4 ರವರ ಹೇಳಿಕೆಗಳನ್ನು ಠಾಣೆಯಲ್ಲಿ ಪಡೆದಿರುತ್ತೇನೆ. ಸದರಿಯವರ ಹೇಳಿಕೆ ಪಡೆಯುವಾಗ ಬೇರೆಯಾರು ಇರಲಿಲ್ಲ. ಚಾಸಾ– 2 ಮತ್ತು 4 ರವರು ಒಂದೇ ಕುಟುಂಬದವರು ಎಂದರೆ ಇರಬಹುದು. ಚಾಸಾ– 2 ರಿಂದ 10 ರವರ ಹೇಳಿಕೆಗಳನ್ನು ಆರೋಪಿಗಳಿಗೆ ಶಿಕ್ಷೆ ಕೊಡಿಸುವ

ಉದ್ದೇಶದಿಂದ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಿಪಿ 18 ರಲ್ಲಿ ದಿನಾಂಕ ಮತ್ತು ಅದನ್ನು ಯಾರಿಗೆ ಕೊಡಲಾಗಿದೆ ಎಂಬುವುದರ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿಪಿ 19 ರಲ್ಲಿ ಸದರಿ ವಿವರ ಇಲ್ಲ ಎಂದರೆ ಸರಿ. ನಿಪಿ 19 ರ ದಾಖಲೆ 19–20 ವರ್ಷಗಳ ಹಳೆ ದಾಖಲೆ ಎಂದರೆ ಸಾಕ್ಷಿ ದಿಃ 10.08.2001 ರ ದಾಖಲೆ ಎನ್ನುತ್ತಾರೆ. ನಿಪಿ 5 ರಿಂದ 19 ರ ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 27 ರ ಫೋಟೋವನ್ನು ನಮ್ಮ ಸಿಬ್ಬಂದಿ ಕ್ಯಾಮಾರಾ ಮೂಲಕ ತೆಗೆದಿದ್ದಾರೆ. ಸದರಿ ಫೋಟೋದಲ್ಲಿ ದಿನಾಂಕ ನಮೂದಾಗಿಲ್ಲ ಎಂದರೆ ಸರಿ. ಚಾಸಾ–19 ಮತ್ತು 20 ಚಾಸಾ–1 ರವರ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ–1 ರವರು ನಿಪಿ 6 ರಿಂದ 19 ರ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ನಿಪಿ –30 ರ ಗಾಯದ ಪ್ರಮಾಣ ಪತ್ರವನ್ನು ನಾನು, ಚಾಸಾ 1 ಮತ್ತು ಚಾಸಾ– 22 ರವರು ಷರೀಕಾಗಿ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಬ್ಯಾಂಕಿಗೆ ಹಣ ಜಮೆ ಮಾಡಿದ ವ್ಯಕ್ತಿಗೆ ಜಮಾ ಚೀಟಿಯನ್ನು ಕೊಡಲಾಗುತ್ತದೆ ಎಂದರೆ ಸರಿ. ನಿಪಿ 20 ರಿಂದ 22 ರ ದಾಖಲೆಗಳಲ್ಲಿ ಪ್ರದೀಪ್ ಕುಮಾರ್ ಎಂಬುವವರ ಹೆಸರು ನಮೂದಾಗಿದೆ ಎಂದರೆ ಸರಿ. ಸದರಿ ದಾಖಲೆಗಳು ಆರೋಪಿತರಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ನಿಪಿ 24 ರ ದಾಖಲೆ ಪ್ರದೀಪ್ ಕುಮಾರ್ ಎಂಬುವವರ ಹೆಸರಿಗೆ ಇದೆ ಎಂದರೆ ಸರಿ. ಸದರಿ ಪ್ರದೀಪ್ ಕುಮಾರ್ ಈ ಪ್ರಕರಣದ 4 ನೇ ಆರೋಪಿ ಎಂದು ತೋರಿಸಲು ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ 1 ರಿಂದ 4 ನೇ ಆರೋಪಿತರು ಪರಸ್ಪರ ಸಂಬಂಧಿಕರು ಎಂದು ಹೇಳಿಕೊಂಡು ಖುದ್ದಾಗಿ ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ ಎನ್ನುತ್ತಾರೆ. ನಿಪಿ 22 ರಿಂದ 24 ರ ದಾಖಲೆಗಳಿಗೂ ಆರೋಪಿತರಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಿಪಿ 25 ಮತ್ತು 35 ರಲ್ಲಿ ನಮುದಿದಾಗಿರುವ ಜಯಲಕ್ಷ್ಮ್ಮ ಎನ್ನುವವರು ಚಾಸಾ– 1 ರವರ ಸಂಬಂಧಿ ಎಂದು ತೋರಿಸಲು ದಾಖಲೆ ಕೊಟ್ಟಿದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ 26 ರ ಸಿಡಿ ಈ ಪ್ರಕಣಕ್ಕೆ ಸಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡವ ಸಲುವಾಗಿ ಸದರಿ ಸಿಡಿಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು ತನಿಖೆ ಕಾಲಕ್ಕೆ ಯಾವುದೇ ಸ್ಥಳಕ್ಕೂ ಭೇಟಿ ಕೊಟ್ಟಿಲ್ಲ, ಪಂಚನಾಮೆ ಮಾಡಿಲ್ಲ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ತನಿಖೆ ಕಾಲಕ್ಕೆ ಯಾವುದೇ ದಾಖಲೇ ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದು ತನಿಖೆ ಕಾಲಕ್ಕೂ ಕಂಡುಬಂದಿದ್ದರೂ ಸಹ ಸುಳ್ಳು ದೊಷರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**Sd/–**

**ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾದಂ.**

**ಭದ್ರಾವತಿ.**